■ ಹನಿ



# ವರ್ಣರಂಜಿತ ಓಮರ್

ಓಮರ್ ಅಬ್ದುಲ್ಲಾಗೀಗ 41ರ ಹರೆಯ. ಈತ ಸಕ್ರಿಯ ರಾಜಕೀಯಕ್ಕೆ ಇಳಿದು ಈಗಾಗಲೆ 13 ವರ್ಷಗಳು ಸಂದಿವೆ. ಈ ಅವಧಿಯಲ್ಲಿ ಮೂರು ಸಲ ಸಂಸತ್ ಸದಸ್ಯರಾಗಿ, ಒಮ್ಮೆ ವಾಜಪೇಯಿ ಸಂಪುಟದಲ್ಲಿ ಕೇಂದ್ರ ಸಚಿವರೂ ಆಗಿ ಗಳಿಸಿದ ಅನುಭವ ಅಪಾರ. ಒಮ್ಮೆ ಅಸೆಂಬ್ಲಿಗೆ ನಿಂತು ಸೋತು, ಬಳಿಕ ಅಲ್ಲಿಂದಲೇ ಗೆದ್ದು ಜಮ್ಮು-ಕಾಶ್ಮೀರದ ಅತಿ ಕಿರಿಯ ಮುಖ್ಯಮಂತ್ರಿ ಎಂಬ ಗೌರವವನ್ನೂ ಪಡೆದಾಗಿದೆ. ಇಷ್ಟಾಗಿಯೂ ಕೆಲವೊಮ್ಮೆ ಅಪಕ್ವ ರಾಜಕಾರಣಿಯಂತೆ ಗೊಂದಲಕಾರಿ ಬೀಸುಹೇಳಿಕೆಯನ್ನು ನೀಡುವುದು ಓಮರ್‌ಗೆ ಅಭ್ಯಾಸವಾಗಿದೆ.

ರಾಜೀವ್‌ಗಾಂಧಿ ಹಂತಕರ ಗಲ್ಲು ಶಿಕ್ಷೆಯನ್ನು ಕೈಬಿಡಬೇಕೆಂದು ಇತ್ತೀಚೆಗೆ ತಮಿಳುನಾಡು ಅಸೆಂಬ್ಲಿಯಲ್ಲಿ ನಿರ್ಣಯ ಅಂಗೀಕರಿಸಲಾಯಿತು. ಅದೇ ವೇಳೆ ಓಮರ್ ಹೇಳಿಕೆಯೊಂದನ್ನು ನೀಡಿದರು. 'ಸಂಸತ್‌ಗೆ ದಾಳಿ ನಡೆಸಿದ ಆರೋಪಿ ಅಫ್ಜಲ್ ಗುರು ಮರಣದಂಡನೆಯನ್ನು ರದ್ದುಗೊಳಿಸಬೇಕೆಂದು ಜಮ್ಮು-ಕಾಶ್ಮೀರ ವಿಧಾನಸಭೆ ನಿರ್ಣಯ ಕೈಗೊಂಡರೆ ಜನ ಏನನ್ನಬಹುದು?' ಎನ್ನುವುದು ಓಮರ್ ಹೇಳಿಕೆ. ದೆಹಲಿ ಹೈಕೋರ್ಟಿನ ಹೊರಗೆ ಬಾಂಬ್ ಸ್ಫೋಟವಾದ ಬೆನ್ನಲ್ಲೆ ಬಂದ ಈ ಹೇಳಿಕೆ ತೀವ್ರ ಪ್ರತಿಕ್ರಿಯೆಯನ್ನು ಹುಟ್ಟು ಹಾಕಿದ್ದು ಸಹಜವೇ. 'ಓಮರ್ ವಿರುದ್ಧ ಕ್ರಿಮಿನಲ್ ಕೇಸ್ ಹೂಡಿ' ಎಂದು ಮಧುರೈ ಹೈಕೋರ್ಟಿಗೆ ವಕೀಲರೊಬ್ಬರು ಈಗ ಅರ್ಜಿಯನ್ನೂ ಸಲ್ಲಿಸಿದ್ದಾರೆ. ರಾಜಕಾರಣಿಯ ಮಟ್ಟಿಗೆ ಇದು ಅನಪೇಕ್ಷಿತ, ಅಕಾಲಿಕ ಹೇಳಿಕೆ ಎನ್ನುವುದು ಓಮರ್‌ಗೆ ಗೊತ್ತಾದಂತಿಲ್ಲ.

ಇಂಗ್ಲೆಂಡಿನಲ್ಲಿ ಹುಟ್ಟಿದ ಓಮರ್, ಕಳೆದ 17 ವರ್ಷಗಳಿಂದ ಜತೆಗಿದ್ದ ಪತ್ನಿ ಪಾಯಲ್‌ನಾಥ್‌ರಿಂದ ಡೈವೋರ್ಸ್ ಪಡೆದು ಇನ್ನೊಂದು ಸುದ್ದಿ ಸೃಷ್ಟಿಸಿದ್ದಾರೆ. ಸಿಖ್ ಪಂಥಕ್ಕೆ ಸೇರಿದ ಮೇಜರ್ ರಾಮನಾಥ್‌ರ ಮಗಳು ಪಾಯಲ್‌ರನ್ನು ಓಮರ್ ಪ್ರೀತಿಸಿ ಮದುವೆಯಾದದ್ದು 94ರಲ್ಲಿ. ಜಹೀರ್, ಜಮೀರ್ ಎಂಬ ಇಬ್ಬರು ಮಕ್ಕಳೂ ಈಗ ದೆಹಲಿಯಲ್ಲಿ ತಾಯಿಯ ಜತೆಗಿದ್ದಾರೆ. ಪತ್ನಿಯ ಜತೆಗಿನ ಡೈವೋರ್ಸ್‌ಗೆ ಕಾರಣ ಓಮರ್‌ರ ಎರಡನೇ ಪ್ರೇಮ ಪ್ರಕರಣ ಎನ್ನುವುದು ಗಾಳಿಸುದ್ದಿ. ಟೀವಿ ಆ್ಯಂಕರ್ ಒಬ್ಬಳನ್ನು ಈಗ ಓಮರ್ ಪ್ರೀತಿಸುತ್ತಿದ್ದಾರಂತೆ. ಆಕೆಗೆ ಮದುವೆಯಾಗಿ ಡೈವೋರ್ಸ್ ಆಗಿ ಆ ಬಳಿಕ ಇಬ್ಬರ ಜತೆಗೆ ಲಿವಿನ್ ಸಂಬಂಧವೂ ಇದ್ದಿತಂತೆ! 'ಆಕೆ ಮುಸ್ಲಿಂ ಅಲ್ಲ' ಎಂದು ಈ ಎರಡನೆ ಮದುವೆಗೆ ಅಪ್ಪ ಫಾರೂಖ್ ಅಬ್ದುಲ್ಲಾ ವಿರೋಧ ಇದೆಯಂತೆ! ಕಾಶ್ಮೀರದ ಹಾಲಿ ಸಚಿವರೊಬ್ಬರ ಮಗಳನ್ನು ಎರಡನೆ ಸೊಸೆಯಾಗಿ ತರಬೇಕೆನ್ನುವುದು ಫಾರೂಕ್ ಅಬ್ದುಲ್ಲಾರ ಇಚ್ಛೆಯಂತೆ!

ಅಂತರ್ಧರ್ಮೀಯ ಮದುವೆ ಅಬ್ದುಲ್ಲಾ ಕುಟುಂಬಕ್ಕೆ ಹೊಸತೇನಲ್ಲ. ಫಾರೂಖ್ ಅಬ್ದುಲ್ಲಾ ಅವರೂ ಬ್ರಿಟಿಶ್ ಮಹಿಳೆಯನ್ನು ಪ್ರೀತಿಸಿ ಮದುವೆಯಾದವರು. ಓಮರ್ ತಂಗಿ ಸಾರಾ, ಸಚಿನ್ ಪೈಲಟ್‌ರನ್ನು ಮದುವೆಯಾಗಿದ್ದಾರೆ. ಆದರೆ ಓಮರ್‌ಗೆ ರಾಜಕೀಯದಂತೆ ವೈಯಕ್ತಿಕ ಜೀವನದಲ್ಲೂ ಈ ಗೊಂದಲ ಏಕೋ ಗೊತ್ತಾಗುತ್ತಿಲ್ಲ.

# ಸೆರೆನಾ ಗರಂ



ಸುಮಾರು ಎರಡು ವರ್ಷಗಳ ಗಾಯಾಳು ಪರ್ವದ ಬಳಿಕ ಮರಳಿ ಬಂದ ಸೆರೆನಾ ವಿಲಿಯಮ್ಸ್ ಯುಎಸ್ ಓಪನ್ ಟೆನಿಸ್‌ನ ಫೈನಲ್‌ಗೆ ತಲುಪಿದರೂ, ಅಲ್ಲಿ ಪ್ರಶಸ್ತಿ ಗೆಲ್ಲಲಾಗದೆ ಸಮಂತಾ ಎದುರು ಸೋಲನುಭವಿಸಿದ್ದಾರೆ. ಈ ಸೋಲು ದೊಡ್ಡ ಸುದ್ದಿಯೇನಲ್ಲ. ಆದರೆ ಸೋಲಿನ ಅಂಚಿನಲ್ಲಿ ನಿಂತು ಟೇಬಲ್ ಅಂಪೈರ್ ಇವಾ ಅಸ್ಟರಕಿ ವಿರುದ್ಧ ಸಿಟ್ಟಿನಿಂದ ಬೈದಾಡಿದ್ದು ಮಾತ್ರ ದೊಡ್ಡ ಸುದ್ದಿ. 'ನನ್ನ ಎದುರಿಗೆ ಬರಬೇಡ. ಎಲ್ಲಾದರೂ ಎದುರಿಗೆ ಸಿಕ್ಕಿದರೆ ಬೇರೆಡೆಗೆ ನೋಡು. ನಿನ್ನ ಬಗ್ಗೆ ನಿನಗೇ ನಿಯಂತ್ರಣವಿಲ್ಲ. ನೀನೊಬ್ಬ ದ್ವೇಷಿ. ಒಳಗಿಂದ ಕುರೂಪಿ ಬೇರೆ! ಕಳೆದ ವರ್ಷ ಯುಎಸ್ ಓಪನ್‌ನಲ್ಲಿ ನೀನೇ ನನಗೆ ಅಂಕ ಕಡಿತ ಮಾಡಿದ್ದಿರಬೇಕಲ್ಲ? ನನ್ನೆಡೆಗೆ ನೋಡಬೇಡ' ಎಂದೆಲ್ಲ ಅಂಪೈರ್ ಮುಂದೆ ನಿಂತು ಕೆಟ್ಟದಾಗಿ ಬೈದಾಡಿದ ಸೆರೆನಾ, ಮಾಧ್ಯಮಗಳಿಂದ ತೀವ್ರ ಟೀಕೆಗೆ ಒಳಗಾಗಿದ್ದಾರೆ.

ಈ ದುರ್ನಡತೆಗಾಗಿ ಸೆರೆನಾಗೆ ಯುಎಸ್ ಟೆನಿಸ್ ಸಂಸ್ಥೆ 2000 ಡಾಲರ್ ದಂಡ ವಿಧಿಸಿದೆ. ಸೆರೆನಾಗೆ ಇದೇನೂ ದೊಡ್ಡ ಮೊತ್ತ ಅಲ್ಲ. ಮಾಜಿ ಚಾಂಪಿಯನ್ ಕ್ರಿಸ್ ಎವರ್ಟ್ ಹೇಳಿದಂತೆ ಅದು ಆಕೆಯ ಒಂದು ಊಟದ ಬಿಲ್ ಅಷ್ಟೆ! ಪ್ರಪಂಚದಲ್ಲೇ ಅತ್ಯಂತ ಹೆಚ್ಚು ಬಹುಮಾನ ಮೊತ್ತ ಗಳಿಸಿರುವಾಕೆ ಸೆರೆನಾ. ಈವರೆಗೆ ಆಕೆ ಗೆದ್ದಿರುವ ಪ್ರಶಸ್ತಿ ಮೊತ್ತ 20 ದಶಲಕ್ಷ ಡಾಲರ್‌ಗೂ ಹೆಚ್ಚಿದೆ. 2009ರಲ್ಲೂ ಹೀಗೆಯೇ ಯುಎಸ್ ಓಪನ್‌ನಲ್ಲಿ ಸೆರೆನಾ ಅಂಪೈರ್ ವಿರುದ್ಧ ಕೂಗಾಡಿದ್ದಳು. 'ನಿನ್ನ ಬಾಯಿಗೆ ಬಾಲು ತುರುಕುತ್ತೇನೆ...' ಎಂದು ಅಸಭ್ಯವಾಗಿ ಬೈದಿದ್ದಳು. ಆಗ 10 ಸಾವಿರ ಡಾಲರ್ ದಂಡ ವಿಧಿಸಲಾಗಿತ್ತು. ಈಗೇಕೆ ಕಡಿಮೆ.. ಎನ್ನುವ ಪ್ರಶ್ನೆ ಎದ್ದಿದೆ. 'ಇನ್ನೊಮ್ಮೆ ದಂಡ ವಿಧಿಸಿದರೆ ಆಕೆ ಯುಎಸ್ ಓಪನ್‌ನಲ್ಲಿ ಭಾಗವಹಿಸದಂತೆ ನಿಷೇಧ ಪಡೆಯಲಿದ್ದಾಳೆ' ಎನ್ನುವ ಕಾರಣಕ್ಕೆ ದಂಡ ಕಡಿಮೆ ಮಾಡಿದ್ದಂತೆ.

ಈಗಾಗಲೆ 13 ಸಿಂಗಲ್ಸ್‌ಗಳ ಸಹಿತ 27 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿರುವ, ಎರಡು ಸಲ ಒಲಿಂಪಿಕ್ ಚಿನ್ನ ಗೆದ್ದಿರುವ ಪ್ರತಿಭಾವಂತೆ, ಅನುಭವಸ್ಥೆ ಸೆರೆನಾಗೆ ಹೀಗೇಕೆ ಸಿಟ್ಟು ಬರುತ್ತದೆ? ಅನುಭವದಿಂದ ಆಕೆ ಪಾಠ ಕಲಿತಿಲ್ಲವೆ?

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65